ಸರ್ಕಾರಿ ಪ್ರೌಢಶಾಲೆಗಳಿಗೆ ಭೋಧಕ ಮತ್ತು ಭೋಧಕೇತರ ಸಿಬ್ಬಂದಿಗಳನ್ನು ನೇಮಿಸುವುದು

453 (663). ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ):- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೆಳಗಾವಿ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತು ಅಸ್ಥಿತ್ವಕ್ಕೆ ಬಂದ ನಂತರ ಜಿಲ್ಲಾಪರಿಷತ್ತು ಹಾಗೂ ಸರ್ಕಾರದವರು ಎಷ್ಟು ಸರ್ಕಾರಿ ಪ್ರೌಢಶಾಲೆಗಳನ್ನು ತೆರೆದಿರುತ್ತಾರೆ ಮತ್ತು ಎಷ್ಟು ಸರ್ಕಾರಿ ಕಿರಿಯ ಮಹಾವಿದ್ಯಾಲಯಗಳನ್ನು ತೆರೆದಿರುವರು? (ತಾಲ್ಲೂಕುವಾರು ಹಾಗೂ ಸ್ಥಳದ ಹೆಸರು ತಿಳಿಸುವುದು)

ಆ) ಶಾಲೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಖಾಯಂ ಆಗಿ ನೇಮಿಸಲಾಗಿದೆಯೇ? ಒಂದು ವೇಳೆ ನೇಮಿಸದೇ ಇದ್ದಲ್ಲಿ ಎಂದಿನಿಂದ ಖಾಯಂ ಆಗಿ ಸಿಬ್ಬಂದಿಗಳ ನೇಮಕ ಮಾಡಲಾಗುವುದು? ಮತ್ತು ಖಾಯಂ ಸಿಬ್ಬಂದಿ ನೇಮಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಇ) ಈ ಶಾಲೆಗಳನ್ನು ತೆರೆದಿರುವುದರಿಂದ ಪ್ರತಿವರ್ಷ ಸರ್ಕಾರದ ಮೇಲೆ ಎಷ್ಟು ಆರ್ಥಿಕ ಭಾರ ಬೀಳುವುದು? ಈ ಆರ್ಥಿಕ ಭಾರ ತುಂಬಿಕೊಡಲು ಸರ್ಕಾರದವರು ಜಿಲ್ಲಾ ಪರಿಷತ್ತಿಗೆ ಯಾವ ರೀತಿಯಿಂದ ಹಣಕಾಸಿನ ಸಹಾಯ ಮಾಡಲಾಗುವುದು?

ಈ) ಈ ಸರ್ಕಾರಿ ಪ್ರೌಢಶಾಲೆಗಳಿಗೆ ಸ್ವತಂತ್ರ ಕಟ್ಟಡ ಕಟ್ಟಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):-

ಅ) ಬೆಳಗಾಂ ಜಿಲ್ಲೆಯಲ್ಲಿ ಜಿಲ್ಲಾಪರಿಷತ್ ಅಸ್ಥಿತ್ವಕ್ಕೆ ಬಂದ ನಂತರ ಜಿಲ್ಲಾಪರಿಷತ್ 6 ಪ್ರೌಢಶಾಲೆಗಳನ್ನು ಮತ್ತು ಸರ್ಕಾರವು 13 ಪ್ರೌಢಶಾಲೆಗಳನ್ನು ತೆರೆದಿದೆ. ಸರ್ಕಾರಿ ಕಿರಿಯ ಮಹಾವಿದ್ಯಾಲಯವನ್ನು ಬೆಳಗಾಂ ಜಿಲ್ಲಾಪರಿಷತ್‌ನವರು ತೆರೆದಿರುವುದಿಲ್ಲ, ಆದರೆ ಬೆಳಗಾಂ ಜಿಲ್ಲೆಗೆ 1991-92ನೇ ಸಾಲಿಗೆ 5 ಸರ್ಕಾರಿ ಪದವಿಪ್ರೂರ್ವ ಕಾಲೇಜುಗಳನ್ನು ತೆರೆಯಲು ಅನುಮತಿ ನೀಡಿದೆ. ಮಂಜೂರಾಗಿರುವ ಪ್ರೌಢಶಾಲೆ ಮತ್ತು ಕಿರಿಯ ಮಹಾವಿದ್ಯಾಲಯಗಳು ತಾಲ್ಲೂಕುವಾರು ಪಟ್ಟಿಯನ್ನು ಲಗತ್ತಿಸಿದೆ.

ಆ) ಶಾಲೆಗಳಿಗೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ನೇಮಕಮಾಡುವ ವಿಷಯವು ಇನ್ನೂ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಇ) ಹೊಸದಾಗಿ ಮಂಜೂರು ಮಾಡಿರುವ ಪ್ರೌಢಶಾಲೆಗಳಿಗಾಗಿ ವರ್ಷಕ್ಕೆ 57 ಲಕ್ಷ ರೂ. ಖರ್ಚು ಬರಲಿದ್ದು, ಈ ಖರ್ಚನ್ನು ಜಿಲ್ಲಾಪರಿಷತ್ತು ತನಗೆ ಸರ್ಕಾರ ನೀಡುವ ಅನುದಾನದಲ್ಲಿ ಭರಿಸಬೇಕು. ಪದವಿ ಪೂರ್ವ ಕಾಲೇಜುಗಳಿಗೆ 24 ಲಕ್ಷ ರೂ. ಖರ್ಚು ಬರಲಿದ್ದು ಇವನ್ನು ಸರ್ಕಾರವೇ ಭರಿಸುವುದು.

ಜಿಲ್ಲಾವಲಯದಲ್ಲಿ 92-93ರ ಸಾಲಿನ ಯೋಜನಾ ಅಯವ್ಯಯದಲ್ಲಿ ಸರ್ಕಾರಿ ಪ್ರೌಢಶಾಲಾ ಕಟ್ಟಡ ಬಾಬ್ತಿಗೆಂದು ರೂ. 50 ಲಕ್ಷ ಒದಗಿಸಿಕೊಂಡಿರುತ್ತಾರೆ.

ಬೆಳಗಾವಿ ಜಿಲ್ಲಾ ಪರಿಷತ್ತು ಪ್ರಾರಂಭಿಸಿರುವ ಪ್ರೌಢಶಾಲೆಗಳ ವಿವರ

1) ಸವದತ್ತಿ ತಾಲ್ಲೂಕು	1	ಸಂಗ್ರೇಶ್‌ಕೊಪ್ಪ
2) ಬೈಲಹೊಂಗಲ ತಾಲ್ಲೂಕು	1	ವಣ್ಣೂರು
3) ಚುಕ್ಕೊಡಿ ತಾಲ್ಲೂಕು	2	ನೇಜ, ಮುನೋಳಿ
4)ಹುಕ್ಕೇರಿ ತಾಲ್ಲೂಕು	1	ಇಸ್ಲಾಂಪುರ
5)ಅಥಣಿ ತಾಲ್ಲೂಕು	1	ಕೊಟ್ಟಲಗಿ
ಒಟ್ಟು	6	

ಸರ್ಕಾರಿ ಮಂಜೂರು ಮಾಡಿರುವ ಪ್ರೌಢಶಾಲೆಗಳ ವಿವರ

1) ಸವದತ್ತಿ ತಾಲ್ಲೂಕು	3	ಸುತಗಟ್ಟಿ, ಯರಝುರವಿ ,ಚಿಕೊಪ್ಪ
2) ಬೈಲಹೊಂಗಲ ತಾಲ್ಲೂಕು	5	ಚಿಕ್ಕಬಾಗೇವಾಡಿ, ಮಲ್ಲಾಪುರ, ಬೈಲವಾಡ, ತುರುಕಾರ ಸೀಗೇಂಗೇಳ, ವಕ್ಕುಂದು
3) ಗೋಕಾಕ್ ತಾಲ್ಲೂಕು	1	ಖಾನಟ್ಟಿ
4) ಚಿಕ್ಕೋಡಿ ತಾಲ್ಲೂಕು	1	ಮಜಲಟ್ಟಿ
5) ಹುಕ್ಕೇರಿ ತಾಲ್ಲೂಕು	2	ನೇರ್ಲಿ ದೇವಲಾಪುರ
6) ಅಥಣಿ ತಾಲ್ಲೂಕು	1	ಬೆಂದಗೇರಿ
ಒಟ್ಟು	13	

ಸರ್ಕಾರ ಮಂಜೂರು ಮಾಡಿರುವ ಕಿರಿಯ ಕಾಲೇಜುಗಳ ವಿವರ

1) ಚಿಕ್ಕೋಡಿ ತಾಲ್ಲೂಕು	2	ನೇಜ ಮಜಲಟ್ಟಿ
2) ಬೈಲಹೊಂಗಲ ತಾಲ್ಲೂಕು	2	ದೇವಲಾಪುರ ವಕ್ಕುಂದ
3) ಬೆಳಗಾಂ ತಾಲ್ಲೂಕು	1	ಹುದಲಿ
ಒಟ್ಟು	5	

ಬೈಲಹೊಂಗಲದ ಬಸ್ ನಿಲ್ದಾಣದ ನವೀಕರಣದ ಬಗ್ಗೆ

454 (664). ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಕ್ಕೆ ಆವರಿತ ಜಾಗ ಮಾಡುವುದಾಗಿ ವಿಧಾನ ಸಭೆಯಲ್ಲಿ ಈ ಹಿಂದೆ ಆಶ್ವಾಸನೆ ಸರ್ಕಾರದವರು ನೀಡಿದ್ದು, ಆ ಆಶ್ವಾಸನೆ ಪ್ರಕಾರ ಆವರಿತ ಜಾಗಮಾಡಲು ಯಾವ ಕ್ರಮ ಕೈಗೊಂಡಿರುವರು?

ಆ) ಇನ್ನೂ ಎಷ್ಟು ದಿನಗಳಲ್ಲಿ ಆವರಿತ ಜಾಗ ಮಾಡಲಾಗುವುದು ಮತ್ತು ಈ ಆವರಿತ ಜಾಗಕ್ಕೆ ಎಷ್ಟು ಹಣ ತಗಲುವುದು?

ಇ) ಡಿಸೆಂಬರ್ 1991 ರಿಂದ ಜನವರಿ 1992 ರವರೆಗೆ ಬೈಲಹೊಂಗಲ ಘಟಕದಿಂದ ಬಸ್ಸುಗಳನ್ನು ಓವರ್ಲೋಡ್ ಆಗಿ ಓಡಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಓವರ್ ಲೋಡ್ ತಪ್ಪಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಉ) ಈ ವರ್ಷ ಮತ್ತು ಹೋದ ವರ್ಷ ಬೆಳಗಾವಿ ವಿಭಾಗಕ್ಕೆ ಎಷ್ಟು ಹೊಸ ಬಸ್‌ಗಳು ಬಂದಿರುತ್ತದೆ ಹಾಗೂ ಅವುಗಳಲ್ಲಿ ಪ್ರತಿಯೊಂದು ಘಟಕಕ್ಕೆ ಎಷ್ಟೆಷ್ಟು ಬಸ್‌ಗಳನ್ನು ನೀಡಲಾಗಿದೆ?

ಶ್ರೀ ಆಜೀಜ್ ಸೇಠ್ (ಸಾರಿಗೆ ಸಚಿವರು):-

ಅ) ಹೌದು. ಈ ಕೆಲಸವನ್ನು 1992-93ನೇ ಸಾಲಿನಲ್ಲಿ ತೆಗೆದುಕೊಳ್ಳಲಾಗುವುದು.

ಆ) 92-93ರಲ್ಲಿ ಸುಮಾರು 6.00 ಲಕ್ಷ ರೂ.ಗಳ ವೆಚ್ಚದಿಂದ ಈ ಕೆಲಸವನ್ನು ತೆಗೆದುಕೊಳ್ಳಲಾಗುವುದು.

ಇ) ಬಂದಿದೆ.

ಮಾರ್ಚ್ 1992 ಮತ್ತು 1992-93ನೇ ಸಾಲಿನಲ್ಲಿ ಸಮೀಪ ಅಂತರದ ಅಧಿಕ ಟ್ರಿಪ್‌ಗಳನ್ನು ಮತ್ತು ಹೆಚ್ಚಿಗೆ ಬಸ್ಸುಗಳನ್ನು ಓಡಿಸಲು ಕ್ರಮ ಕೈಗೊಂಡಿದೆ.